**ಮೆ|| ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂಡಾಧಿಕಾರಿಗಳು, ನರಗುಂದ**

**ಸಿಸಿ ನಂ.9/2023**
**ಚಾಸಾಃ6/ಪ್ರಾಸಾಃ 5**
**ದಿನಾಂಕಃ 21-01-2026**
**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

| | |
|---|---|
| ಸಾಕ್ಷಿದಾರರ ಹೆಸರು | ಬಸಯ್ಯ ಮೇಟಿ |
| ತಂದೆ/ಗಂಡನ ಹೆಸರು | ಶರಣಬಸಯ್ಯ |
| ವಯಸ್ಸು | 52 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸ | ರಾಮದುರ್ಗ |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದ**

ಆರೋಪಿತನ ಪರಿಚಯ ಇಲ್ಲ. ಚಾಸಾ- 5 ನನ್ನ ತಂದೆ , ಚಾಸಾ-1 , 4 ರವರ ಪರಿಚಯ ಇದೆ. ದಿಃ 30-07-2022 ರಂದು ಬೆಳಿಗ್ಗೆ 9.30 ಗಂಟೆಯ ಸಮಯದಲ್ಲಿ ಕುಳಗೇರಿಯಿಂದ ನರಗುಂದಕ್ಕೆ ಗೊಬ್ಬರ ತರಲು ಬೈಕ ನಂಬರ ಕೆಎ-25/ಡಬ್ಲೂ-8887 ನೇದ್ದರ ಮೇಲೆ ಬರುವಾಗ ಕೊಣ್ಣೂರು ಗ್ರಾಮದ ಪೆಟ್ರೋಲ ಬಂಕ ಹತ್ತಿರ ಎದುರುಗಡೆಯಿಂದ ಕೆಎಸಆರಟಿಸಿ ಬಸ್ ಅತೀ ವೇಗವಾಗಿ ಬಂದು ನನ್ನ ಬೈಕಗೆ ಡಿಕ್ಕಿ ಪಡಿಸಿರುತ್ತದೆ. ಸದರಿ ಅಪಘಾತದಿಂದ ನನ್ನ ಎಡಗಾಲಿಗೆ ಮತ್ತು ಬೆನ್ನಿಗೆ ಗಾಯವಾಗಿರುತ್ತವೆ. ಸದರಿ ಬಸ್ ಚಾಲಕನನ್ನು ನೋಡಿರುವುದಿಲ್ಲ. ಆತನ ಹೆಸರು ಗೊತ್ತಿಲ್ಲ. ಅಪಘಾತದಿಂದ ಪ್ರಜ್ಞೆ ಹೋಗಿದ್ದು , ಪ್ರಜ್ಞೆ ಬಂದಾಗ ಬಾಗಲಕೋಟೆಯ ಕಟ್ಟಿ ಆಸ್ಪತ್ರೆಗೆ ದಾಖಲಾಗಿದ್ದೇನು. ಪ್ರಕರಣದ ಕುರಿತು ಚಾಸಾ-1 ರವರು ದೂರು ನೀಡಿದ್ದಾರೆ. ಸದರಿ ಬಸ್ ಸಂಖ್ಯೆ ಗೊತ್ತಿಲ್ಲ. ಪ್ರಕರಣದ ಕುರಿತು ಪೋಲಿಸರು ಹೇಳಿಕೆ ಪಡೆದಿಲ್ಲ.

**(ಈ ಹಂತದಲ್ಲಿ ಮುಖ್ಯ ವಿಚಾರಣೆಯನ್ನು ಪರಿಗಣಿಸಿ ಅಭಿಯೋಜನೆ ಪರ ವಕೀಲರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

ಪಾಟೀ ಸವಾಲುಃ ಮಾನ್ಯ ಸಸಅ ರವರಿಂದ

ನನಗೆ ಅಪಘಾತ ಮಾಡಿದ KSRTC ಬಸ್ ನಂಬರ KA-33 F-0407 ನೇದ್ದು ಆಗಿದೆ

ಎಂಬುದು ಗೊತ್ತಿಲ್ಲ. ಸದರಿ ಬಸ್ ಚಾಲಕನ ಹೆಸರು ಸಂಗನಗೌಡ ಹಣಮಂತರಾಯ ಮಾಲಿಬಿರಾದರ ಎಂದು ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ಸದರಿ ಬಸ್ ಚಾಲಕನ್ನು ನೋಡಿರುತ್ತೇನೆ ಎಂದರೆ ಸರಿಯಲ್ಲ. ಪ್ರಕರಣದ ಕುರಿತು ದಿಃ19-09-2022 ರಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-16 ಎಂದು ಗುರುತಿಸಲಾಯಿತು. ಸದರಿ ಬಸ್ ಚಾಲಕ ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿತನಾಗಿದ್ದಾನೆ ಎಂದರೆ ಸರಿಯಲ್ಲ. ಎಲ್ಲ ವಿಚಾರ ಗೊತ್ತಿದ್ದರೂ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ. ಆರ್ ಟಿ ಸಿ 1 ನೇ ಆರೋಪಿತನ ಪರ ವಕೀಲರಿಂದಃ**

ಸದರಿ ದಿನ ನಾನು ಕುಳಗೇರಿಯಲ್ಲಿರುವ ತೋಟದ ಮನೆಯಿಂದ ಹೋಗಿದ್ದೇನು. ನಾನು ಖಾಯಂ ತರೀಖ ರಾಮದುರ್ಗದಲ್ಲಿ ವಾಸವಾಗಿರುತ್ತೇನೆ. ಸದರಿ ದಿನ ರಾಮದುರ್ಗದಿಂದ ಬೆಳಿಗ್ಗೆ 8.00 ರಿಂದ 8.30 ಗಂಟೆಯ ಸಮಯದಲ್ಲಿ ಹೊರಟಿರಬಹುದು. ರಾಮದುರ್ಗದಿಂದ ಕುಳಗೇರಿಗೆ ಬರಲು 1 ಗಂಟೆ ಬೇಕಾಗುತ್ತದೆ ಎಂದರೆ ಸರಿ. ಕೂಲಿ ಆಳುಗಳ ಮೂಲಕ ಕೆಲಸ ಮಾಡಿಸುತ್ತಿದ್ದೇನು. 9.00 ಗಂಟೆಯವರೆಗೆ ಕೆಲಸ ಮಾಡಿಸಿ ಬಂದಿದ್ದೇನು. ಈ ಎಲ್ಲ ವಿಷಯಗಳ ಕುರಿತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ರಾಮದುರ್ಗದಲ್ಲಿಯೂ ಸಹ ಸಾಕಷ್ಟು ಗೊಬ್ಬರದ ಅಂಗಡಿಗಳು ಇವೆ ಎಂದರೆ ಸರಿ. ಅದೇ ರೀತಿ ಕುಳಗೇರಿ ಕ್ರಾಸನಲ್ಲಿ ಸಹ ಸಾಕಷ್ಟು ಗೊಬ್ಬರದ ಅಂಗಡಿಗಳು ಇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸಹ ಬೇರೆ ಕೆಲಸ ಇದ್ದುದ್ದರಿಂದ ನರಗುಂದಕ್ಕೆ ಹೋಗುತ್ತಿದ್ದೇನು ಎಂದು ನುಡಿಯುತ್ತಾರೆ. ಕೊಣ್ಣೂರಿನಲ್ಲಿಯೂ ಸಹ ಸಾಕಷ್ಟು ಗೊಬ್ಬರದ ಅಂಗಡಿಗಳು ಇವೆ ಎಂದರೆ ಸರಿ. ಪ್ರಕರಣಕ್ಕೆ ಅನುಕೂಲವಾಗುವಂತೆ ಚಾಸಾ 1 , 4, 5 ರವರೊಂದಿಗೆ ಸೇರಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1, 4, 5 ನಮ್ಮ ಸಂಬಂಧಿಕರು ಎಂದರೆ ಸರಿ. ಅಪಘಾತದ ಸಮಯದಲ್ಲಿ ಕೊಣುಣ್ಣೂರು ಗ್ರಾಮದಿಂದ ನರಗುಂದದವರೆಗೆ ರಸ್ತೆ ರಿಪೇರಿ ಕೆಲಸ ನಡೆದಿತ್ತು ಎಂಬುದು ಗೊತ್ತಿಲ್ಲ. ಅಪಘಾತ ಸ್ಥಳದಿಂದ 100 ಮೀ ಅಂತರದಲ್ಲಿ ಶಾಲೆ, ಮಾರುಕಟ್ಟೆ ಇವೆ ಎಂಬುದು ಗೊತ್ತಿಲ್ಲ. ಕಾರಣ ಸದರಿ ಸ್ಥಳದಲ್ಲಿ ರಸ್ತೆ ವೇಗ ನಿಯಂತ್ರಕ (ಹಂಪ್ಸ) ಇದೆ ಎಂಬುದು ಗೊತ್ತಿಲ್ಲ.ಕೊಣ್ಣೂರು ಗ್ರಾಮದ ಪ್ರಾರಂಭದಲ್ಲಿ ಮತ್ತು ಅಂತ್ಯದಲ್ಲಿ ಬೃಹತ್ತಾದ ರಸ್ತೆ ಹಂಪ್ಸ ಇವೆ ಎಂಬುದು ಗೊತ್ತಿಲ್ಲ. ಸದರಿ ಹಂಪ್ಸಗಳ ಬಗ್ಗೆ ಮಾಹಿತಿ ಇದ್ದರೂ ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪಘಾತವು ಬಸ್ ಚಾಲಕನ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನೇ ಬೈಕನ್ನು ಅಜಾಗರೂಕತೆಯಿಂದ ಮತ್ತು ಅತೀ ವೇಗವಾಗಿ ಚಾಲನೆ ಮಾಡಿ, ನಿಯಂತ್ರಣ ಕಳೆದುಕೊಂಡು ರಸ್ತೆಯ ಮೇಲೆ ಬಿದ್ದಿರುತ್ತೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯಲು ಆರೋಪಿತನ ವಿರುದ್ಧ ಸುಳ್ಳು

ಪ್ರಕರಣ ದಾಖಲಿಸಿದೇವೆ ಎಂದರೆ ಸರಿಯಲ್ಲ. ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ .

ಜೆ ಎಂ ಎಫ್ ಸಿ ನರಗುಂದ